ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಒಟ್ಟು ೫ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಧಿಕಾರಿಗಳು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿರುತ್ತಾರೆ.

೧) ಶ್ರೀಮತಿ ಟಿ. ಜಯಮ್ಮ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಬೆಂಗಳೂರು (ನಗರ)- (ಪರಿಶಿಷ್ಟ ಜಾತಿ)

೨) ಶ್ರೀ ಎಂ. ಆರ್ ಚಂದ್ರಶೇಖರಮೂರ್ತಿ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಮಂಡ್ಯ. (ಪರಿಶಿಷ್ಟ ಜಾತಿ)

೩) ಶ್ರೀ ಮುನಿವೆಂಕಟಪ್ಪ (ಕೆಎಎಸ್), ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮೈಸೂರು, (ಪರಿಶಿಷ್ಟ ಜಾತಿ)

೪) ಶ್ರೀ ಎನ್. ಬಿ. ಬೆಳವಾಡಿ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಧಾರವಾಡ, (ಪರಿಶಿಷ್ಟ ಜಾತಿ)

೫) ಶ್ರೀ ಕೆ. ಎಸ್. ಮೃತ್ಯುಂಜಯ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಚಿಕ್ಕಮಗಳೂರ (ಪರಿಶಿಷ್ಟ ವರ್ಗ)

ಮೈಸೂರು ನಗರದಲ್ಲಿ ವಿದ್ಯುತ್ ಅವ್ಯವಸ್ಥೆ

೧೦೧೩. (ಎ) ಶ್ರೀ ಕೆ. ಹರ್ಷಕುಮಾರ್‌ಗೌಡ (ಚಾಮರಾಜ).— ಮಾನ್ಯ ಕೈಗಾರಿಕೆ, ಇಂಧನ ಮಂತ್ರಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದಲ್ಲಿ ವಿದ್ಯುಚ್ಛಕ್ತಿಯ ತೀವ್ರ ಅವ್ಯವಸ್ಥೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು.)

ಅ) ಮೈಸೂರು ನಗರದ ಕೆಲವು ಪ್ರದೇಶಗಳಲ್ಲಿ ಆಗಾಗ ವಿದ್ಯುಚ್ಛಕ್ತಿ ಅಡಚಣೆ ಉಂಟಾಗುತ್ತಿರುವ ವಿಷಯವು ವಿದ್ಯುಚ್ಛಕ್ತಿ ಮಂಡಳಿಯ ಗಮನಕ್ಕೆ ಬಂದಿದೆ.

ಆ) ಈ ಅಡಚಣೆಯನ್ನು ನಿವಾರಿಸಿ, ವಿದ್ಯುತ್ ಪರಿಸ್ಥಿತಿಯನ್ನು ಉತ್ತಮಪಡಿಸಲು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕೆಳಗೆ ನಮೂದಿಸಿರುವ ಕ್ರಮಗಳನ್ನು ಕೈಗೊಂಡಿದೆ.

೧) ಭೂಗತ ಕೇಬಲ್‌ಗಳಲ್ಲಿ ಉಂಟಾಗುವ ದೋಷಗಳನ್ನು ಆದಷ್ಟು ಜಾಗ್ರತೆ ಸರಿಪಡಿಸುವುದು.

೨) ಮೈಸೂರು (ದಕ್ಷಿಣ) ವಿದ್ಯುತ್ ಸಬ್-ಸ್ಟೇಷನ್ನಿನಲ್ಲಿ ಹೆಚ್ಚುವರಿ ಸರ್ಕ್ಯೂಟ್ ಬ್ರೇಕರ್‌ಗಳನ್ನು ಅಳವಡಿಸುವುದು.

೩) ವಿತರಣಾ ವ್ಯವಸ್ಥೆಯಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಲೋಡ್ ಇರುವ ಸ್ಥಳಗಳಲ್ಲಿ ಸ್ಥಾಪಿಸುವುದು.

ಅಬಕಾರಿ ಇಲಾಖೆಯಲ್ಲಿ ಸೋರಿ ಹೋಗುವುದನ್ನು ತಡೆ ಹಿಡಿಯಲು ಕ್ರಮ ಸೋರಿಕೆ ಬಗ್ಗೆ

೧೦೧೪ (ಎ) ಶ್ರೀ ಹರ್ಷಕುಮಾರ ಗೌಡ (ಚಾಮರಾಜ).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಅಬಕಾರಿ ಇಲಾಖೆಯಲ್ಲಿ ಆದಾಯ ಸೋರಿ ಹೋಗುವುದನ್ನು ತಪ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

(ಆ) ಇದರಿಂದಾಗಿ ಸರ್ಕಾರಕ್ಕೆ ಬರುವ ಹೆಚ್ಚುವರಿ ಆದಾಯವೆಷ್ಟು?

ಶ್ರೀ ಎಂ. ರಾಜಶೇಖರ ಮೂರ್ತಿ (ಆರ್ಥಿಕ ಮತ್ತು ಅಬಕಾರಿ ಸಚಿವರು.)

(ಅ) ಸುರಕ್ಷತೆಗಾಗಿ ಅಂಟಿಸುವ ಚೀಟಿಗಳನ್ನು ಹೊತ್ತುಪಡಿಸಿದೆ. ಸರ್ಕಾರದ ಸ್ವಾಮ್ಯದ ಏಜೆಂಟರಿಂದ ಮದ್ಯವನ್ನು ವಿತರಿಸುವುದು, ಕಡ್ಡಾಯ ತಪಾಸಣೆ, ತೆರಿಗೆ ತಪ್ಪಿಸಿದ ಮದ್ಯ ಮತ್ತು ವಾಹನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು.

(ಆ) ೧೯೮೯-೯೦ ರ ಸಾಲಿನಲ್ಲಿ ಸುಮಾರು ೨೦ ಕೋಟಿ ರೂಪಾಯಿಗಳು.